# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಯೋಜನಾ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ ಆದೇಶ–

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಪಿಡಿ 117 ಸಿಓಪಿ 93, ದಿನಾಂಕ:4.10.1993
2) ಸರ್ಕಾರದ ಆದೇಶ ಸಂಖ್ಯೆ: ಪಿಡಿ 55 ಪಿಆರ್‌ಐ 95, ದಿನಾಂಕ:4.3.1995
3) ಸರ್ಕಾ ರದ ಆದೇಶ ಸಂಖ್ಯೆ: ಪಿಡಿ 288 ಪಿಆರ್‌ಪಿ 96, ದಿನಾಂಕ:12.8.1996
4) ಸರ್ಕಾರದ ಆದೇಶ ಸಂಖ್ಯೆ: ಪಿಡಿ 249 ಪಿಆರ್‌ಐ 98, ದಿನಾಂಕ:27.8.1998
5) ಸರ್ಕಾರದ ಆದೇಶ ಸಂಖ್ಯೆ: ಪಿಡಿ 38 ಎಸ್‌ಪಿಬಿ 2000(ಭಾ), ದಿನಾಂಕ:17.7.2001
6) ಸರ್ಕಾರದ ಆದೇಶ ಸಂಖ್ಯೆ: ಪಿಡಿ 95 ಎಸ್‌ಪಿಬಿ 2003, ದಿನಾಂಕ:27.10.2003
7) ಸರ್ಕಾರದ ಆದೇಶ ಸಂಖ್ಯೆ: ಪಿಡಿ 10 ಎಸ್‌ಪಿಬಿ 2005, ದಿನಾಂಕ:20.11.2006
8) ಸರ್ಕಾರದ ಆದೇಶ ಸಂಖ್ಯೆ: ಪಿಡಿ 10 ಎಸ್‌ಪಿಬಿ 2005(ಭಾ), ದಿನಾಂಕ:6.12.2007
9) ಸರ್ಕಾರದ ಆದೇಶ ಸಂಖ್ಯೆ: ಪಿಡಿ 38 ಎಸ್‌ಪಿಬಿ 2008(ಭಾ), ದಿನಾಂಕ:10.9.2008
10) ಸರ್ಕಾರದ ಆದೇಶ ಸಂಖ್ಯೆ: ಪಿಡಿ 48 ಎಸ್‌ಪಿಬಿ 2010, ದಿನಾಂಕ:22.9.2010
11) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 121 ಶಿಸನೀ 2010, ದಿನಾಂಕ:4.11.2010

**ಪ್ರಸ್ತಾವನೆ:**

ರಾಜ್ಯದ ಯೋಜನೆಗಳಿಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಸಲಹೆ ನೀಡುವ ಸಲುವಾಗಿ ರಾಜ್ಯ ಯೋಜನಾ ಮಂಡಳಿಯನ್ನು ರಚಿಸಿ ಉಲ್ಲೇಖ(1) ರಲ್ಲಿ ಓದಲಾದ, ದಿನಾಂಕ:4.10.1993ರ ಸರ್ಕಾರದ ಆದೇಶದಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2) ರಿಂದ (9)ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ ರಾಜ್ಯ ಯೋಜನಾ ಮಂಡಳಿಯನ್ನು ಕಾಲಕಾಲಕ್ಕೆ ಪುನರ್ರಚಿಸಲಾಗಿರುತ್ತದೆ. ಉಲ್ಲೇಖ(10)ರಲ್ಲಿ ಓದಲಾದ ದಿನಾಂಕ:22.9.2010ರ ಸರ್ಕಾರದ ಆದೇಶದಲ್ಲಿ ಶ್ರೀ ರಾಮಚಂದ್ರ ಗೌಡ, ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿರುತ್ತದೆ ಮತ್ತು ಉಲ್ಲೇಖ(11)ರಲ್ಲಿ ಓದಲಾದ ದಿನಾಂಕ:4.11.2010ರ ಸರ್ಕಾರದ ಅಧಿಸೂಚನೆಯಲ್ಲಿ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಲಾಗಿರುತ್ತದೆ. ಸರ್ಕಾರವು ಈಗ ರಾಜ್ಯ ಯೋಜನಾ ಮಂಡಳಿಗೆ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಉದ್ದೇಶಿಸಿರುತ್ತದೆ. ಅದರಂತೆ ರಾಜ್ಯ ಯೋಜನಾ ಮಂಡಳಿಯನ್ನು ಪುನರ್ರಚಿಸಲಾಗಿದೆ.

ಅದರಂತೆ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಪಿಡಿ 82 ಎಸ್‌ಪಿಬಿ 2011**
**ಬೆಂಗಳೂರು, ದಿನಾಂಕ:10.3.2011**

ರಾಜ್ಯ ಯೋಜನಾ ಮಂಡಳಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡಂತೆ ಪುನರ್ರಚಿಸಲಾಗಿದೆ.

| | |
|---|---|
| 1) ಮಾನ್ಯ ಮುಖ್ಯಮಂತ್ರಿಗಳು | – ಅಧ್ಯಕ್ಷರು |
| 2) ಮಾನ್ಯ ಶ್ರೀ ರಾಮಚಂದ್ರ ಗೌಡ | – ಉಪಾಧ್ಯಕ್ಷರು |
| 3) ಮಾನ್ಯ ಸಚಿವರು, ಉನ್ನತ ಶಿಕ್ಷಣ, ಯೋಜನೆ ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | – ಸದಸ್ಯರು |
| 4) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | – ಸದಸ್ಯರು |
| 5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | – ಸದಸ್ಯರು |
| 6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | – ಸದಸ್ಯರು |
| 7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | – ಸದಸ್ಯರು |
| 8) ಡಾ: ಎಂ.ಮಹಾದೇವಪ್ಪ<br>ನಿರ್ದೇಶಕರು ಜೆ.ಎಸ್.ಎಸ್. ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ<br>(ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರ) | – ಸದಸ್ಯರು |
| 9) ಶ್ರೀಮತಿ ಸುಧಾಮೂರ್ತಿ<br>ಇನ್‌ಫೋಸಿಸ್ ಪ್ರತಿಷ್ಠಾನ, ಬೆಂಗಳೂರು<br>(M.Y.R.A.D.A ಪ್ರತಿನಿಧಿ) | – ಸದಸ್ಯರು |
| 10) ಪ್ರೊ. ಹೆಚ್.ಪಿ. ಕಿಂಚಾ<br>ಮಾಜಿ ಕುಲಪತಿಗಳು<br>ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ಇಂಜಿನಿಯರಿಂಗ್ ಕ್ಷೇತ್ರ) | – ಸದಸ್ಯರು |
| 12) ಡಾ: ರಘುನಂದನ್, ಮಾಜಿ ಕಾರ್ಯದರ್ಶಿಗಳು<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>ಕರ್ನಾಟಕ ಸರ್ಕಾರ | – ಸದಸ್ಯರು |
| 13) ಪ್ರೊ. ಜಿ.ವಿ. ಜೋಶಿ<br>ಜಸ್ಟೀಸ್ ಕೆ.ಎಸ್.ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್<br>ನಿಟ್ಟೆ–574 110 | – ಸದಸ್ಯರು |

14) ಶ್ರೀ ಎಂ.ಸಿ. ಕೊಡ್ಲಿ
ಅರ್ಥಶಾಸ್ತ್ರ ಪ್ರೊಫೆಸರ್ (ನಿವೃತ್ತ)
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ — ಸದಸ್ಯರು

15) ಡಾ: ವೈ.ಎ.ದೇವಪಾಲ್
#13/23, ಬಜಾರ್ ರಸ್ತೆ
ಕೃಷ್ಣರಾಜನಗರ
ಮೈಸೂರು ಜಿಲ್ಲೆ — ಸದಸ್ಯರು

16) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ — ಪದನಿಮಿತ್ತ ಸದಸ್ಯ ಕಾರ್ಯದರ್ಶಿ

2) ಉಲ್ಲೇಖ(5)ರಲ್ಲಿ ಓದಲಾದ ದಿನಾಂಕ:17.7.2001ರ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುವ ರಾಜ್ಯ ಯೋಜನಾ ಮಂಡಳಿಯ ಕಾರ್ಯಗಳು ಮುಂದುವರೆಯುತ್ತವೆ. ಅವುಗಳು ಕೆಳಕಂಡಂತಿದೆ:-

1) ಪಂಚವಾರ್ಷಿಕ ಯೋಜನೆ ಮತ್ತು ವಾರ್ಷಿಕ ಯೋಜನೆಗಳನ್ನು ರೂಪಿಸುವುದು ಹಾಗೂ ಕಾರ್ಯಗತಗೊಳಿಸುವ ಬಗ್ಗೆ ಸಲಹೆ ನೀಡುವುದು.

2) ಸ್ವಾಭಾವಿಕ ಮತ್ತು ಮಾನವ ಸಂಪನ್ಮೂಲಗಳ ಗರಿಷ್ಠ ಬಳಕೆಗಾಗಿ ನೀತಿಗಳನ್ನು ಸಲಹೆ ನೀಡುವುದು.

3) ರಾಜ್ಯದಲ್ಲಿ ಪ್ರಾಂತೀಯ ಅಸಮತೋಲನವನ್ನು ಕಡಿಮೆಗೊಳಿಸಲು ಸೂಕ್ತವಾದ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ನೀಡುವುದು.

4) ಆರ್ಥಿಕ ಸುಧಾರಣೆ ಕಾರ್ಯಕ್ರಮಗಳಿಗನುಸಾರವಾಗಿ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳ ಹೂಡಿಕೆಯನ್ನು ಸುಧಾರಿಸಲು ಸಲಹೆಗಳನ್ನು ನೀಡುವುದು.

5) ಯೋಜನೆಯಡಿ ಬಂಡವಾಳ ಹೂಡಿಕೆ ಮಟ್ಟಗಳ ಬಗ್ಗೆ ಮತ್ತು ಅದಕ್ಕಾಗಿ ಸಂಪನ್ಮೂಲ ಸಂಗ್ರಹಣೆಗೆ ಅಗತ್ಯವಾದ ಸಲಹೆ ನೀಡುವುದು.

6) ರಾಷ್ಟ್ರೀಯ ಯೋಜನೆಯ ಚೌಕಟ್ಟಿನೊಳಗೆ ರಾಜ್ಯ ಯೋಜನೆಗೆ ಸೂಕ್ತವಾದ ಆದ್ಯತೆ ಹಾಗೂ ತಂತ್ರಗಳನ್ನು ರೂಪಿಸಲು ಸಲಹೆ ನೀಡುವುದು.

7) ಯೋಜನಾ ಕಾರ್ಯಕ್ರಮಗಳು/ಯೋಜನೆಗಳ ಅನುಷ್ಠಾನ ಮತ್ತು ಇವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅಗತ್ಯವಾದ ಸೂಕ್ತ ಸಲಹೆ ನೀಡುವದು.

8) ವಿಕೇಂದ್ರೀಕೃತ ಯೋಜನೆಯನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಸೂಚಿಸುವುದು ಹಾಗೂ ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಗತಗೊಳಿಸುವಿಕೆ ಹಾಗೂ ಈ ಯೋಜನೆಗಳನ್ನು ರಾಜ್ಯ ವಲಯ ಯೋಜನೆಗಳಲ್ಲಿ ವಿಲೀನಗೊಳಿಸಲು ಅಗತ್ಯವಾದ ಕ್ರಮಗಳ ಸಲಹೆ ನೀಡುವುದು.

9) ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ವಹಿಸುವ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡುವುದು.

10) ರಾಜ್ಯ ಯೋಜನಾ ಮಂಡಳಿಯ ಕೆಲಸಗಳಿಗೆ ಅಗತ್ಯವಾದ ಸಂಶೋಧನಾ ಅಧ್ಯಯನ ಮತ್ತು ವಿಚಾರ ಸಂಕಿರಣಗಳನ್ನು ಸರ್ಕಾರದ ಹೊರಗಿನ ವಿಶ್ವವಿದ್ಯಾನಿಲಯಗಳು ಅಥವಾ ಇತರೆ ಸಂಶೋಧನಾ ಸಂಸ್ಥೆಗಳಿಂದ ಪ್ರಾಯೋಜಿಸುವುದು.

3) ರಾಜ್ಯ ಯೋಜನಾ ಮಂಡಳಿಯ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳ ಅಧಿಕಾರ ಹಾಗೂ ಮುಂದಾಳತ್ವದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರು ಮಂಡಳಿಯ ಕೆಲಸ ಕಾರ್ಯಗಳು, ದಕ್ಷತೆ ಮತ್ತು ಸುಗಮವಾಗಿ ನೆರವೇರಲು ಅಗತ್ಯವಾದ ಅಧಿಕಾರವನ್ನು ಚಲಾಯಿಸುವುದು.

4) 1) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ಅನುಬಂಧ–Aರ ಪಟ್ಟಿಯ ಪ್ರಕಾರ ಮಂಡಳಿಯ ಅಧಿಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆಯನ್ನು ನೀಡಲು ಮಂಜೂರಾತಿಯನ್ನು ನೀಡಲಾಗಿದೆ.

2) ದಿನಭತ್ಯೆ ಅನ್ವಯಿಸುವ ಕಡೆಯಲ್ಲಿ ಅದರ ಬದಲು ಮಂಡಳಿಯ ಸಭೆಗಳಿಗೆ ಹಾಜರಾಗುವ ಅಧಿಕಾರೇತರ ಸದಸ್ಯರಿಗೆ ದಿನವೊಂದಕ್ಕೆ ರೂ.500/–ಸಭಾ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

5) ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ರಾಜ್ಯ ಯೋಜನಾ ಮಂಡಳಿಯ ಕಾರ್ಯಗಳ ಅಧಿಕಾರ ಹೊಂದಿರುತ್ತಾರೆ ಮತ್ತು ರಾಜ್ಯ ಯೋಜನಾ ಮಂಡಳಿಗೆ ಸಂಬಂಧಿಸಿದ ಲೆಕ್ಕಪತ್ರ ಶೀರ್ಷಿಕೆಯಡಿಯಿರುವ ನಿಧಿಯ ನಿರ್ವಹಣಾ ಅಧಿಕಾರ ಹೊಂದಿರುವರು.

6) ಇದಕ್ಕೆ ತಗಲುವ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ"3451–00–101–4–00" ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Chhabai 10/3/2011
(ಉಷಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ–3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ
9/3/2011

ಇವರಿಗೆ
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ರಾಜ್ಯ ಯೋಜನಾ ಮಂಡಳಿಗೆ ಕೂಡಲೇ ಒದಗಿಸುವಂತೆ ಕೋರಿ ಕಳುಹಿಸಲಾಗಿದೆ.

ಪ್ರತಿಗಳನ್ನು

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
3. ಮಾನ್ಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ವಿಕಾಸ ಸೌಧ, ಬೆಂಗಳೂರು
4. ರಾಜ್ಯ ಯೋಜನಾ ಮಂಡಳಿಯ ಎಲ್ಲಾ ಸದಸ್ಯರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
6. ಇಲಾಖೆಯ ಮುಖ್ಯಸ್ಥರು,
7. ಉನ್ನತ ಶಿಕ್ಷಣ, ಯೋಜನೆ ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿಗಳು
8. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ, ಆಪ್ತ ಕಾರ್ಯದರ್ಶಿಗಳು
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಸದಸ್ಯ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ ಇವರ ಆಪ್ತ ಕಾರ್ಯದರ್ಶಿಗಳು
13. ನಿರ್ದೇಶಕರು, ಯೋಜನಾ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
14. ಉಪ ಕಾರ್ಯದರ್ಶಿಗಳು(ಆಡಳಿತ), ಯೋಜನಾ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
15. ಪ್ರೆಸ್ ಟೇಬಲ್
16. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು